ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೆಳ್ತಂಗಡಿ

ಸಿ.ಸಿ. 726/2024

| | | |
|---|---|---|
| ಸಾಕ್ಷಿದಾರರ ಹೆಸರು | : ಪೂರ್ಣಿಮ ವಿ | |
| ಗಂಡನ ಹೆಸರು | : ಅನುದೀಪ್ | ಡಿ.ಡಬ್ಲ್ಯೂ - 01 |
| ವಯಸ್ಸು | : 33 ವರ್ಷ | |
| ಉದ್ಯೋಗ | : ವ್ಯಾಪಾರ | ಪ್ರಮಾಣ ವಚನ ಬೋಧಿಸಲಾಯಿತು ದಿನಾಂಕ 29.04.2026 |
| ವಾಸ ಸ್ಥಳ | : ಚಿಪ್ಪಾಡಿ ಗ್ರಾಮ | |

ಮುಖ್ಯ ವಿಚಾರಣೆ ಃ- ಶ್ರೀ ಪಿ ಎಂ ವಕೀಲರಿಂದ, ಆರೋಪಿಯ ಪರವಾಗಿ

ದೂರುದಾರರು ನನಗೆ 4 ವರ್ಷಗಳಿಂದ ವ್ಯವಹಾರದ ಮೂಲಕ ಪರಿಚಯ. ನಾನು ಒಂದು ಬಾರಿ ದೂರುದಾರರಿಂದ ರೂ.2 ಲಕ್ಷ ಹಣವನ್ನು ಸಾಲವಾಗಿ ಪಡೆದಿದ್ದೆ. ಆ ಸಮಯದಲ್ಲಿ ಒಂದು ಕರಾರು ಪತ್ರ ಹಾಗೂ 2 ಚೆಕ್ಕುಗಳನ್ನು ನನ್ನಿಂದ ಪಡೆದುಕೊಂಡಿರುತ್ತಾರೆ. ಸದರಿ ಸಾಲ ಪಡೆದ ಒಂದೂವರೆ ವರ್ಷದ ಒಳಗೆ ಸದರಿ ಸಾಲವನ್ನು ಬಡ್ಡಿ ಸಮೇತ ಮರುಪಾವತಿ ಮಾಡಿರುತ್ತೇನೆ. ಆ ರೀತಿ ಸಾಲವನ್ನು ಮರುಪಾವತಿ ಮಾಡಿದ ನಂತರ ನನ್ನ ಕರಾರು ಪತ್ರ ಹಾಗೂ ಚೆಕ್ಕುಗಳನ್ನು ಹಿಂದುರುಗಿಸಿ ಎಂದು ನಾನು ಕೇಳಿಕೊಂಡಿರುತ್ತೇನೆ, ಆದರೆ ದೂರುದಾರರು ಈಗ ಬೇರೆ ಕೆಲಸದಲ್ಲಿದ್ದೇನೆ, ಆ ನಂತರ ಕೊಡುತ್ತೇನೆ ಎಂದು ತಿಳಿಸಿರುತ್ತಾರೆ. ಆದರೆ ಹಾಗೆ ಹೇಳಿದ ಒಂದು ವಾರದಲ್ಲಿ ಚೆಕ್ಕು ಅಮಾನ್ಯವಾಗಿರುತ್ತದೆ. ನಾನು ನಿಪಿ-1ರ ಬಾಬ್ತು ನಾನು ದೂರುದಾರರಿಗೆ ಯಾವುದೇ ಹಣ ಕೊಡಲು ಬಾಕಿ ಇರುವುದಿಲ್ಲ. ಆದ್ದರಿಂದ ನನ್ನನ್ನು ಬಿಡುಗಡೆಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟಿ ಸವಾಲಿಗೆ ಕಾಲಾವಶಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ